ಬೇಜಾರಿನಲ್ಲಿ ನಿಂತಿದ್ದ ಸುಗುಣಳಿಗೆ 'ಏನು ನೋಡ್ತಿದ್ದೀಯಾ? ಈ ವಯಸ್ಸಿನಲ್ಲಿ ಎಷ್ಟೋ ಹುಡುಗರು ಬರೀ ಓತ್ಲಾ ಹೊಡ್ಕೊಂಡು ಕೆಲಸ ಮಾಡ್ದೆ ಅಲ್ಲಿ ಇಲ್ಲಿ ಹುಡುಗೀರ ಹಿಂದೆ ಅಲೆದಾಡ್ಕೊಂಡಿರ್ತವೆ. ಇವನು ಸೀರಿಯಸ್ಸಾಗಿ ಕೆಲಸಾ ಮಾಡ್ತಾ ಇದಾನಲ್ಲ, ಅದಕ್ಕೆ ಬೆನ್ನು ತಟ್ಟಬೇಕು. ಇನ್ನೆಷ್ಟೋ ಹುಡುಗ್ರು ಆಫೀಸು ಬಿಟ್ಟ ತಕ್ಷಣ ಬಾರಿನ ಮುಖ ನೋಡ್ತಾವೆ. ಅದೇನೂ ಇಲ್ದೆ ಸೀದಾ ಮನೆಗೆ ಬರ್ತಾನಲ್ಲ, ಅದಕ್ಕೆ ಸಂತೋಷಪಡು. ಆಫೀಸಲ್ಲಿ ಕೆಲಸ ಜಾಸ್ತಿ ಇದ್ದಾಗ ಇದೆಲ್ಲಾ ಮಾಮೂಲು ತಾನೇ. ಇದು ನಿನಗೆ ಗೊತ್ತಿರೋದೇ. .' ಎಂದು ಬ್ಯಾಟಿಟ್ಟು ಬಾತ್‌ರೂಮಿಗೆ ನಡೆದರು. ಸ್ವಿಸ್ ಗಡಿಯಾರ ಹಕ್ಕಿಯ ಕಲರವದೊಂದಿಗೆ ಏಳು ಗಂಟೆ ತೋರಿಸಿತು. ಟಿ.ವಿ.ಯಲ್ಲಿ ಮಂತ್ರಿ ದುರ್ಬುದ್ಧಿಯೂ ಕುಣಿದು ಸುಸ್ತಾಗಿ ಕಾರ್ಯಕ್ರಮ ಮುಗಿಸಿದ.

ಸುಗುಣಳಿಗೂ ಇದೆಲ್ಲ ಗೊತ್ತಿಲ್ಲವೆಂದೇನಿಲ್ಲ. ಅವಳೂ ಬಿ.ಇ. ಮುಗಿಸಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡಿದವಳೇ. ಮದುವೆಗೆ ಮುಂಚೆಯೇ ಅವಳಿಗೆ ಒಳ್ಳೆಯ ಕಂಪನಿಯಲ್ಲಿ ಕೆಲಸವಿತ್ತು. ಹಿರಿಯರು ನಿಶ್ಚಯಿಸಿದ ಮದುವೆ. ಪ್ರಸಾದ ತಾನು ಇಲೆಕ್ಟ್ರಾನಿಕ್ ಸಿಟಿಗೆ ಓಡಾಡಲು ಬೈಕ್ ಕೊಂಡು ಅವಳ ಆಫೀಸಿನ ಹತ್ತಿರವೇ ಮನೆ ಮಾಡಿ ಉದ್ಯೋಗಕ್ಕೆ ಅನುಕೂಲ ಮಾಡಿಕೊಟ್ಟ. ಎರಡು ವರ್ಷಗಳವರೆಗೆ ಎಲ್ಲಾ ಯೋಚಿಸಿದಂತೆ ಸುಸೂತ್ರವಾಗೇ ನಡೆದಿತ್ತು. ನಂತರ ಕುಣಾಲ್ ಅವಳ ಹೊಟ್ಟೆಯಲ್ಲಿ ಒಡಮೂಡಿದಾಗ ವಾಂತಿ, ಸಂಕಟ, ಸುಸ್ತು ಆರಂಭವಾಯಿತು. ಮ್ಯಾನೇಜರ್ ತುಂಬಾ ಸ್ಟ್ರಿಕ್ಟು. 'ರ್, ವರ್ಕ್ ಫ್ರಮ್ ಹೋಮ್ ಕೊಡ್ತೀರಾ?' ಎಂದು ಸುಗುಣ ಕೇಳಿದ್ದಿತ್ತು. ಆಸಾಮಿ ಕೊಂಚ ಉರಿಮುಖದಿಂದಲೇ 'ನೋಡಮ್ಮಾ, ಎಲ್ಲರಿಗೂ ಪ್ರಾಬ್ಲೆಮ್ಸ್ ಇರೋದೇ. ನೀವು ಕೇಳಿದಂತೆಲ್ಲಾ ಕೊಡೋಕಾಗೋಲ್ಲ. ಕೆಲಸ ಸಾಗ್ಬೇಕಲ್ಲ. ನೀವೇನ್ಮಾಡ್ತೀರೋ ಗೊತ್ತಿಲ್ಲ. ಪ್ರೊಜೆಕ್ಟ್ ನಾಳೆ ಲೈವ್ ಹೋಗುತ್ತೆ. ಕೆಲಸ ಮುಗಿಸಿ ಹೋಗಿ' ಎಂದಿದ್ದರು ಕಟುವಾಗಿ.

ಅವರಿಗೆ ಅವರ ಮೇಲಿನವರ ಒತ್ತಡ. ಹದಿನೈದು ದಿನಗಳ ನಂತರ ಒಮ್ಮೆ ಆಫೀಸಿನಲ್ಲೇ ತಲೆ ತಿರುಗಿ ಬಿದ್ದಿದ್ದಳು ಸುಗುಣ. ಆಗ ಹ್ಯೂಮನ್ ರಿಸೋರ್ಸ್ ಡಿಪಾರ್ಟಮೆಂಟಿನವರು ಮಧ್ಯೆ ಪ್ರವೇಶಿಸಿ ರಜೆ ಕೊಡಿಸಿದ್ದರು. ಆದರೂ ಆರೋಗ್ಯ ಹದಗೆಟ್ಟು ಆಸ್ಪತ್ರೆಯಲ್ಲಿ ಅಡ್ಮಿಟ್ ಆದಾಗ ತಲೆಕೆಟ್ಟು ಪ್ರಸಾದ್ ರಾಜೀನಾಮೆ ಕೊಡಿಸಿದ್ದ. 'ಮಗು ಕೊಂಚ ದೊಡ್ಡದಾದ ಮೇಲೆ ಮತ್ತೆ ಸೇರುವೆಯಂತೆ' ಎಂದು ಸಂತೈಸಿದ್ದ. ಆದರದು ಸಾಧ್ಯವಾಗಲೇ ಇಲ್ಲ. ಕುಣಾಲ್‌ಗೆ ಎರಡು ವರ್ಷಗಳಿದ್ದಾಗಲೇ ಪ್ರಸಾದನ ತಂದೆ ಕ್ಯಾನ್ಸರ್ ಪೀಡಿತರಾಗಿ ಬಳಲಿದರು. ಅತ್ತೆಗೆ ಬೆಂಗಳೂರು ಹೊಸದು. ಆಸ್ಪತ್ರೆ, ಔಷಧಿ, ಉಪಚಾರ, ಕೀಮೋಥೆರಪಿ ಎಂದೆಲ್ಲ ಅವರ ಜೊತೆ ಸುಗುಣಳೇ ಓಡಾಡಿದ್ದು. ಅತ್ತೆ, ಮಾವ ಇಬ್ಬರೂ 'ನನ್ನ ಸೊಸೆ ಮಗಳಿಗಿಂತಲೂ ಹೆಚ್ಚಾಗಿ ನೋಡ್ಕೋತಾಳೆ' ಎಂದು ಮನದಾಳದಿಂದ ನುಡಿದದ್ದೂ ನಿಜವೇ. ಪ್ರಸಾದ ಸಂತುಷ್ಟನಾಗಿದ್ದ. ಆದರೆ ಆ ಖುಷಿ ಹೆಚ್ಚು ದಿನವಿರಲಿಲ್ಲ. ಮುಂದೆ ಕೆಲವೇ ದಿನಗಳಲ್ಲಿ ಅವರಪ್ಪ ಭೂಮಿಯ ಋಣ ತೀರಿಸಿಕೊಂಡರು. ಹೃದಯದ ತೊಂದರೆಯಿಂದ ಬಳಲುತ್ತಿದ್ದ ಅತ್ತೆಯನ್ನು ಅಪ್ಪಿಕೊಂಡು ಸಂತೈಸಿದ್ದು ಸುಗುಣಳೇ.

ಮುಂದೆ ಅತ್ತೆಯ ಸರದಿ. ಕೆಲಸಕ್ಕೆ ಸೇರುವುದು ದೂರದ ಮಾತು. ಉಸಿರಾಡಲೂ ಅವಕಾಶವಿಲ್ಲದಂತೆ ಅವರ ಔಷಧೋಪಚಾರ ನಡೆಯಿತು. ಮತ್ತೆರಡು ವರ್ಷಗಳು ಕಳೆದವು. ಮೂರನೇ ವರ್ಷ ಮೊಮ್ಮಗನಿಗೆ ಕೈ ಬೀಸುತ್ತಲೇ ಕುಸಿದವರು ಮೇಲೇಳಲಿಲ್ಲ. ದುಃಖದ ದಿನಗಳು ಕಳೆಯುತ್ತಿದ್ದಂತೆ ಸುಗುಣ ಕೆಲಸಕ್ಕೆ ಸೇರಲು ಮನಸ್ಸು ಮಾಡಿದಳು. ಕುಣಾಲ್ ಕೂಡ ಈಗ ಕೊಂಚ ದೊಡ್ಡವನಾಗಿದ್ದ. ತನ್ನ ಪಾಡಿಗೆ ವ್ಯಾನ್ ಏರಿ ಶಾಲೆಗೆ ಹೋಗುತ್ತಿದ್ದ. ಆಗ ಮಧ್ಯೆ ಬಂದದ್ದು ಅವಳ ತಾಯಿ. ಮುಪ್ಪಿನ ಚಿಪ್ಪಿನಲ್ಲಿ ಹುದುಗಿ ಮುದ್ದೆಯಾಗಿದ್ದರು. 'ನೀನು ನೋಡ್ಕೊಳ್ಳೊದಾದ್ರೆ ಇರ್ತೀನಮ್ಮ, ಇಲ್ಲಾಂದ್ರೆ.. ..ಯಾವುದಾದರೊಂದು ಆಶ್ರಮ ಸೇರಿಸಿಬಿಡು. ಇಲ್ಲಾ ಬಾವಿಗೆ ನೂಕಿ ಬಿಡು' ಎಂದದ್ದೊಂದೇ ಮಾತು. ಅವಳು ದ್ರವಿಸಿ ಹೋಗಿದ್ದಳು. ಅವರು ಕಣ್ಮುಚ್ಚಿದ ನಂತರ ಇಂಡಸ್ಟ್ರಿ ಬೆಳೆದು ಎಲ್ಲಿಗೋ ಮುಟ್ಟಿತ್ತು. ಅಂತರ ತೀರ ಹೆಚ್ಚಾಗಿತ್ತು. ಪ್ರಸಾದನಿಗೂ ಬಡ್ತಿ ದೊರಕಿ ಸೀನಿಯರ್ ಮ್ಯಾನೇಜರ್‌ನಾಗಿದ್ದ.

'ನೀನು ದುಡಿಯುವ ಅವಶ್ಯಕತೆ ಇದೆಯಾ' ಎಂದು ಅವನು ಕೇಳಿದ್ದು ಅವಳಿಗೆ ಬೃಹದಾಕಾರದ ಪ್ರಶ್ನೆಯಾಗಿ ಪರಿಣಮಿಸಿತ್ತು. ಉತ್ತರ ಹುಡುಕುವುದು ಕಷ್ಟವಾಗಿತ್ತು. ಸುಗುಣ ಇನ್ನೂ ಆ ಮ್ಯಾನೇಜರ್‌ಗೆ ಶಾಪ ಹಾಕುತ್ತಾಳೆ. ಕೊಂಚ ಕರುಣೆಯಿಂದ ನೋಡಿದ್ದರೆ ಸರಿ ಹೋಗಿರೋದು. ನಾನಿನ್ನೂ ಬೇಕಾದ ಹಾಗೆ ಕೆಲಸ ಮಾಡ್ತಾ ಇದ್ದೆ. ಕರಿಯರ್ ಆಗಿರೋದು ಎಂದು ಹಳಿಯುವದು ಇದ್ದೇ ಇದೆ. ಪರ್ಯಾಯವಾಗಿ ಅವಳು ತನ್ನ ಅಭಿರುಚಿಗಳತ್ತ ಗಮನ ಹರಿಸಿದಳು. ಯಕ್ಷಗಾನದ ಪ್ರಸಂಗಗಳನ್ನಲ್ಲದೇ ಕಲಾವಿದರ ಬದುಕಿನ ಕುರಿತಾಗಿಯೂ ಆಸಕ್ತಿ ವಹಿಸಿದಳು. ಬದುಕು ಸಾಗಿತ್ತು ಸರಾಗವಾಗಿ..ನಿರಂಬಳವಾಗಿ.. .ಯಕ್ಷಗಾನದ ಪಾತ್ರಗಳಂತೆ ಧಿಂ..ಧೀಂ...ಎಂಬ ಕುಣಿತವಿರಲಿಲ್ಲ.

ಕುಣಾಲನ ಓದು, ಟೆನಿಸ್ ಇತ್ಯಾದಿಗಳ ಮಧ್ಯೆ ಸಮಯ ಸರಿದದ್ದೇ ತಿಳಿಯಲಿಲ್ಲ. ಅವಳ ಬೆಳ್ಳಿ ಕೂದಲುಗಳು ಮಿಂಚಿದಾಗ ಅವನು ಬೆಂಗಳೂರಿನ ಖ್ಯಾತ ಆರ್.ವಿ. ಕಾಲೇಜಿನಲ್ಲಿ ಬಿ.ಇ. ಪದವೀಧರನಾಗಿದ್ದ. ಇನ್ನೂ ಏಳನೇ ಸೆಮಿಸ್ಟರ್ ಓದುತ್ತಿರುವಾಗಲೇ ಬಹುರಾಷ್ಟ್ರೀಯ ಕಂಪನಿಗಳು ಕೈಬೀಸಿ ಕರೆದು ಕ್ಯಾಂಪಸ್ ಮೂಲಕವೇ ಕೆಲಸ ಕೊಟ್ಟವು. ಸುಗುಣ, ಪ್ರಸಾದ ಇಬ್ಬರೂ ಸಮಾಧಾನದ ಉಸಿರು ಬಿಟ್ಟಿದ್ದರು. ಮೂರು ತಿಂಗಳು ಹೈದರಾಬಾದ್‌ನಲ್ಲಿ ಟ್ರೇನಿಂಗ್ ಮುಗಿಸಿಕೊಂಡು ಬಂದವನಿಗೆ ಒಳ್ಳೆಯ ಪ್ರಾಜೆಕ್ಟ್ ದೊರಕಿತ್ತು. ಆರೆಂಟು ತಿಂಗಳು ಕೈತುಂಬ ಕೆಲಸವಿದ್ದರೂ ಸಂತೋಷದಿಂದಿರುತ್ತಿದ್ದ. 'ಅಮ್ಮಾ, ಅಪ್ಪ ಬಂದಂಗೆ ಸಂಜೆ ಆರೂವರೆಗೋ, ಏಳಕ್ಕೋ ನನಗೆ ಮನೆಗೆ ಬರಕ್ಕಾಗೋಲ್ಲ. ಕೆಲಸ ಮುಗಿಸಿ ಮ್ಯಾನೇಜರ್ ಬಿಟ್ಟ ಮೇಲೇ ಬರಬೇಕು. ಆದರೆ ನಮ್ಮ ಮ್ಯಾನೇಜರ್ ಒಳ್ಳೆಯವರಮ್ಮ, ಕೆಲಸ ಹೇಳಿಕೊಡ್ತಾರೆ. ತಿಳೀಲಿಲ್ಲಾಂದ್ರೆ ತಿಳಿಸ್ತಾರೆ' ಎಂದ. ಇಬ್ಬರಿಗೂ ಕೀಟಲೆ ಮಾಡುತ್ತ ಶನಿವಾರ, ಭಾನುವಾರಗಳಲ್ಲಿ ಒತ್ತಾಯದಿಂದ ಹೊರಗೆ ಕರೆದೊಯ್ಯುತ್ತಿದ್ದ. ಪಿಕ್ಚರ್, ಪಾರ್ಟಿ ಎಲ್ಲಾ ಅವನದ್ದೇ. ಒಮ್ಮೊಮ್ಮೆ ನೆಂಟರಿಷ್ಟರ ಮನೆಗಳೂ ಸೇರುತ್ತಿದ್ದವು. 'ಅಪ್ಪಾ, ನೀನು ಹಿಂದೆ ಕೂತ್ಕೊಂಡು ಬಿಡು' ಎನ್ನುತ್ತ ಕಾರಿನ ಸ್ಟೇರಿಂಗ್ ಹಿಡಿದರೆ ಬಿಡುತ್ತಿದ್ದುದು ತಿರುಗಿ ಬಂದ ಮೇಲೇ.

ಈ ಗ್ರಹಣ ಹಿಡಿದಂಥ ಪರಿಸ್ಥಿತಿ ಶುರುವಾಗಿದ್ದು ಇತ್ತೀಚೆಗೆ... .. ತೀರ ಇತ್ತೀಚೆಗೆ. ಅವನನ್ನು ಹೊಸ ಪ್ರಾಜೆಕ್ಟಿಗೆ ಹಾಕಿದರು. ಹೊಸ ಮ್ಯಾನೇಜರ್, ಹೊಸ ಕೆಲಸ, ಎಲ್ಲಾ ಹೊಸದೇ. ಆರಂಭದಿಂದಲೇ ಕಿರಿಕಿರಿ ಇತ್ತು. ತಿಂಗಳಾದ ಮೇಲೂ ಬಾಡಿದ ಮುಖ ಹೊತ್ತು ರಾತ್ರಿ ಹನ್ನೊಂದು, ಹನ್ನೆರಡು ಗಂಟೆಗೆಲ್ಲಾ ಮನೆಗೆ ಬರತೊಡಗಿದ. ಒಮ್ಮೊಮ್ಮೆ ಬೆಳಗಿನ ಜಾವ ನಾಲ್ಕು ಗಂಟೆಗೆ ಬಂದು ಮಲಗಿದ್ದೂ ಇತ್ತು. ಸುಗುಣ ವ್ಯಾಕುಲಳಾಗಿದ್ದಳು. 'ಅದ್ಯಾವ ಹಾಳು ಪ್ರಾಜೆಕ್ಟು ಹೇಳಬಾರ್ದೇನೋ.. ..ಯಾರು ಮ್ಯಾನೇಜರ್..' ಎಂದು ಕೇಳುತ್ತ ಕಳವಳಗೊಂಡಳು. 'ಶ್ಯಾಮ್ ಅಂತಿದಾರೆ. ಇದೆಲ್ಲಾ ಇರೋದೇ ಅಮ್ಮ, ಸದ್ಯ ಏನೂ ಕೇಳಬೇಡ. ಒಂದು ಹಂತಕ್ಕೆ ಬಂದ ನಂತರ ಹೇಳ್ತೀನಿ' ಎಂಬ ಉತ್ತರ ಬಂದಿತ್ತು. ಸಮಾಧಾನವಾಗಿರಲಿಲ್ಲ ಅವಳಿಗೆ. ಪ್ರಸಾದ ಕೂಡ ಚಿಂತಿತರಾಗಿದ್ದರು. ಅವರಿಗೆ ಇದೇನೂ ಹೊಸದಲ್ಲವಾದರೂ ಸ್ವತಃ ತಮ್ಮ ಕರುಳು ಕಷ್ಟಪಡುವಾಗ ಮನ ಆರ್ದ್ರವಾಗುತ್ತಿತ್ತು. ಅವನ ಮ್ಲಾನವದನ ಅಪ್ಪ, ಅಮ್ಮಂದಿರ ಸಮಾಧಾನವನ್ನೂ ಕಿತ್ತುಕೊಂಡು ಮನೆಯಲ್ಲಿ ನಗೆಯೇ ಮಾಯವಾಗಿತ್ತು.

'ಸುಗುಣ, ಕಾಫಿ ಆಯ್ತಾ?' ಎಂದು ಪ್ರಸಾದ್ ಕೂಗಿದಾಗ ವಾಸ್ತವಕ್ಕೆ ಬಂದ ಸುಗುಣ ಎರಡು ಕಪ್ ಕಾಫಿ ಬೆರೆಸಿ ತಂದಳು. ಅವರಿಗೆ ಕೊಟ್ಟು ತಾನೊಂದು ಹಿಡಿದುಕೊಂಡು 'ಮ್ಯಾನೇಜರ್.. .. ಅದಾರೋ ಶ್ಯಾಮ್ ಅಂತೆ ನೋಡಿ. ತುಂಬಾ ಕಿರಿಕ್ ಪಾರ್ಟಿಯಂತೆ' ಎಂದು ನುಡಿದಳು. 'ಯಾವ ಶ್ಯಾಮ್' ಎಂದು ಅವರು ತಲೆಕೆರೆದುಕೊಂಡರು. 'ನನಗೆ ಗೊತ್ತಿದ್ದಂತೆ ಅವರ ಕಂಪನಿಯಲ್ಲಿ ರಾಧೇಶ್ಯಾಮ್ ಡೆಲಿವರಿ ಮ್ಯಾನೇಜರ್. ಆದರೆ ಅವರು ತುಂಬಾ ಒಳ್ಳೆಯವರು. ಹೀಗೆ ಮಾಡಲು ಸಾಧ್ಯವೇ ಇಲ್ಲ. ಮತ್ತಾವ ಶ್ಯಾಮ್.. ಗೊತ್ತಿಲ್ಲ' ಎಂದರು. ಸುಗುಣ ತಡೆಯಲಾರದೇ 'ಸ್ವಲ್ಪ ವಿಚಾರಿಸಿ ನೋಡಬಾರ್ದಾ? ಮಗು ಇಷ್ಟೊಂದು ಕಷ್ಟಪಡ್ತಿದಾನೆ..' ಎಂದು ಕಂಗಳಲ್ಲೇ ನೋವು ತುಂಬಿಕೊಂಡು ಕೇಳಿದಳು. ಪ್ರಸಾದ್ ಗಂಭೀರವಾಗಿ 'ಪತ್ತೆ ಮಾಡಲು ಬಹಳ ಸಮಯ ಹಿಡಿಯೋದಿಲ್ಲ ಸುಗುಣ. ಆದರೆ ಇನ್ನೊಂದು ಕಂಪನಿಯಲ್ಲಿ ನಾವು ತಲೆ ಹಾಕುವುದು ಅಷ್ಟೊಂದು ಸಮಂಜಸವೆನಿಸುವದಿಲ್ಲ. ಪ್ರತಿ ಕಂಪನಿಯಲ್ಲೂ ಇಂಥವು ನಿತ್ಯ ಸಾವಿರಾರು ನಡೀತಾನೇ ಇರ್ತವೆ. ನಮ್ಮ ಮಗ ಅಂದಾಕ್ಷಣ ನಮಗೆ ಕರುಳು ಚುರ್ ಅಂದ್ಬಿಡುತ್ತೆ. ಇನ್ನೊಂದೆರಡು ದಿನ ನೋಡೋಣ ಇರು..' ಎನ್ನುತ್ತ ಕಾಫಿ ಕುಡಿದರು.

ಪ್ರಸಾದ್ ಆಫೀಸು ಹೊಕ್ಕರೂ ಮಗನ ದುಗುಡ ತುಂಬಿದ ಮುಖ